ಕರ್ನಾಟಕಸರ್ಕಾರ

**ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು.**

**ರಾಷ್ಟ್ರೀಯ ಸೇವಾ ಯೋಜನೆ**

ಸಂಖ್ಯೆ: ಪಪೂಶಿಇ/ರಾಸೇಯೋ/02/ /2019-20 ದಿನಾಂಕ:16-11-2019

**ವಿಷಯ** : ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿಗಳಿಗೆ ಮಂಗಳೂರು ವಿಭಾಗಮಟ್ಟದಲ್ಲಿ ಒಂದು ದಿನದ ಪುನಃಶ್ಚೇತನ ಕಾರ್ಯಗಾರ ಹಮ್ಮಿಕೊಳ್ಳುವ ಬಗ್ಗೆ.

**ಉಲ್ಲೇಖ** : ಸಂಖ್ಯೆ: ಪಪೂಶಿಇ/ರಾಸೇಯೋ/02/136/2019-20 ದಿನಾಂಕ:16-10-2019

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಪದವಿ ಪೂರ್ವ ಶಿಕ್ಷಣ ಇಲಾಖೆಯ ರಾಷ್ಟ್ರೀಯ ಸೇವಾ ಯೋಜನೆಯ ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿಗಳಿಗೆ ವಿಭಾಗ ಮಟ್ಟದಲ್ಲಿ 2019-2020ನೇ ಸಾಲಿಗೆ ಹಮ್ಮಿಕೊಳ್ಳಬಹುದಾದ ಕಾರ್ಯಚಟುವಟಿಕೆಗಳ ಬಗ್ಗೆ ಹಾಗೂ PFMS ಮಾಹಿತಿ ನೀಡುವ ಸಲುವಾಗಿ ಒಂದು ದಿನದ ಕಾರ್ಯಗಾರವನ್ನು 4 ವಿಭಾಗಗಳಲ್ಲಿ ಉಲ್ಲೇಖದ ಆದೇಶದಂತೆ ನಿಗದಿತ ದಿನಾಂಕಗಳಂದು ಹಮ್ಮಿಕೊಳ್ಳಲಾಗಿತ್ತು.

ಆದರೆ ಮೈಸೂರು ವಿಭಾಗಕ್ಕೆ ಒಳಪಡುವ ಉಡುಪಿ, ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳಲ್ಲಿ ಅತಿ ಹೆಚ್ಚಿನ ಮಳೆಯಾದ ಕಾರಣ ದಿನಾಂಕ:26.10.2019 ರಂದು ಮೈಸೂರು ವಿಭಾಗದಲ್ಲಿ ನಡೆದ ತರಬೇತಿ ಕಾರ್ಯಾಗಾರದಲ್ಲಿ ಉಡುಪಿ, ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳ ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿಗಳು ಪಾಲ್ಗೊಳ್ಳಲು ಸಾದ್ಯವಾಗಿರುವುದಿಲ್ಲ ಹಾಗೂ ಮಾನ್ಯ ನಿರ್ದೇಶಕರ ಮೌಖಿಕ ಅನುಮತಿಯ ಮೇರೆಗೆ ಉಡುಪಿ, ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳ ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿಗಳಿಗೆ ಸದರಿ ಕಾರ್ಯಾಗಾರದಿಂದ ವಿನಾಯ್ತಿ ನೀಡಲಾಗಿತ್ತು.

ಈಗಾಗಲೇ ನಿಗದಿಪಡಿಸಿದ ಮೇಲ್ಕಂಡ ಒಂದು ದಿನದ ತರಬೇತಿ ಕಾರ್ಯಗಾರವನ್ನು **ಉಡುಪಿ, ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳ ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿಗಳಿಗೆ ದಿನಾಂಕ:21.11.2019ರಂದು ಬೆಳಿಗ್ಗೆ 9-00 ಗಂಟೆಯಿಂದ ಸಂಜೆ 5-00 ಗಂಟೆಯವರೆಗೆ ಗಣಪತಿ ಅನುದಾನಿತ ಪದವಿ ಪೂರ್ವ ಕಾಲೇಜು, ಜಿ.ಎಚ್.ಎಸ್ ರೋಡ್, ಹಂಪನಕಟ್ಟೆ, ಮಂಗಳೂರು ಇಲ್ಲಿ ಹಮ್ಮಿಕೊಂಡಿರುತ್ತದೆ.**

ಸಂಬಂಧಿಸಿದ ಜಿಲ್ಲೆಗಳ ಪ್ರಾಂಶುಪಾಲರುಗಳು ತಮ್ಮ ಕಾಲೇಜಿನ ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿಗಳನ್ನು ಕಾರ್ಯಾಗಾರಕ್ಕೆ ತಪ್ಪದೇ ಹಾಜರಾಗಲು ಸೂಚಿಸಿ ಕಾಲೇಜಿನ ಕರ್ತವ್ಯದಿಂದ ಬಿಡುಗಡೆ ಮಾಡಲು ತಿಳಿಸಿದೆ.

ಈ ಮೇಲೆ ತಿಳಿಸಲಾಗಿರುವ 04 ಕಾರ್ಯಗಾರಗಳಲ್ಲಿ ತರಬೇತಿ ನೀಡಲು ಈ ಕೆಳಕಂಡ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರನ್ನು ನಿಯೋಜಿಸಲಾಗಿದೆ.

ಡಾ.ರಮೇಶ್.ಸಿ.ಜಿ, ಎನ್.ಎಸ್.ಎಸ್ ರಾಜ್ಯ ಸಂಯೋಜನಾಧಿಕಾರಿಗಳು, ಪಪೂಶಿಇ, ಬೆಂಗಳೂರು.

ಶ್ರೀ ಮಂಜುನಾಥ.ಪಿ, ವಿಭಾಗೀಯ ಅಧಿಕಾರಿಗಳು, ಬೆಂಗಳೂರು ವಿಭಾಗ, ಪಪೂಶಿಇ, ಬೆಂಗಳೂರು.

ಶ್ರೀಮತಿ ಸವಿತ. ವೈ ವಿಭಾಗೀಯ ಅಧಿಕಾರಿಗಳು ಮಂಗಳೂರು ವಿಭಾಗ , ಪಪೂಶಿಇ, ಬೆಂಗಳೂರು.

ಶ್ರೀ ರಾಧಾಕೃಷ್ಣ, ಎನ್.ಎಸ್.ಎಸ್ ಕೋಶ ಪಪೂಶಿಇ, ಬೆಂಗಳೂರು.

ಪ್ರಯಾಣ ಭತ್ಯೆ: ಕಾರ್ಯಕ್ರಮಾಧಿಕಾರಿಗಳಿಗೆ ಪ್ರಯಾಣ ಭತ್ಯೆಯನ್ನು ಕೆ.ಸಿ.ಎಸ್.ಆರ್ ನಿಯಮ ರೀತ್ಯಾ ತಮ್ಮ ಕಾಲೇಜಿನ ಎನ್.ಎಸ್.ಎಸ್ ದೈನಂದಿನ ಚಟುವಟಿಕೆಗಳಿಗೆ ಬಿಡುಗಡೆಯಾಗುವ ಪ್ರಥಮ ಕಂತಿನ ಅನುದಾನದ ಜೊತೆಗೆ ಬಿಡುಗಡೆ ಮಾಡಲಾಗುವುದು. ಪ್ರಯಾಣ ಭತ್ಯೆ ಬಿಲ್ಲನ್ನು ಕಾರ್ಯಗಾರದ ಸಂದರ್ಭದಲ್ಲಿ ಕಡ್ಡಾಯವಾಗಿ ಸಲ್ಲಿಸಿದಲ್ಲಿ ಮಾತ್ರ ಪ್ರಯಾಣ ಭತ್ಯೆಯನ್ನು ನೀಡಲಾಗುವುದು. ಕಾರ್ಯಗಾರಕ್ಕೆ ಹಾಜರಾಗುವ ಕಾರ್ಯಕ್ರಮಾಧಿಕಾರಿಗಳ ಗೈರು ಹಾಜರಿಯನ್ನು ಅನ್ಯಕಾರ್ಯ ನಿಮಿತ್ತವೆಂದು ಪರಿಗಣಿಸಲು ಸೂಚಿಸಲಾಗಿದೆ.

(ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ.)

ರಾಜ್ಯ ಸಂಯೋಜನಾಧಿಕಾರಿಗಳು,
ರಾಷ್ಟ್ರೀಯ ಸೇವಾ ಯೋಜನಾ ಕೋಶ,
ಪದವಿ ಪೂರ್ವ ಶಿಕ್ಷಣ ಇಲಾಖೆ

ಕ್ರಮಕ್ಕಾಗಿ,
**ಉಡುಪಿ, ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳ ಎನ್.ಎಸ್.ಎಸ್ ಘಟಕಗಳನ್ನು ಹೊಂದಿರುವ ಪದವಿ ಪೂರ್ವ ಕಾಲೇಜುಗಳ ಎಲ್ಲಾ ಪ್ರಾಂಶುಪಾಲರು ಮತ್ತು ಕಾರ್ಯಕ್ರಮಾಧಿಕಾರಿಗಳು.**

<u>ಪ್ರತಿಗಳು:</u>

1. ಸಹಾಯಕ ಕಾರ್ಯಕ್ರಮ ಸಲಹೆಗಾರರು, ಎನ್.ಎಸ್.ಎಸ್ ಪ್ರಾಂತೀಯ ಕೇಂದ್ರ, ಭಾರತ ಸರ್ಕಾರ, ಆರ್.ವಿ. ರಸ್ತೆ ಬೆಂಗಳೂರು.
2. ರಾಜ್ಯ ಸಂಪರ್ಕಾಧಿಕಾರಿಗಳು ಹಾಗೂ ಪದ ನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು, ರಾಷ್ಟ್ರೀಯ ಸೇವಾ ಯೋಜನೆ, ಯುವಜನ ಸೇವಾ ಇಲಾಖೆ, ಕರ್ನಾಟಕ ಸರ್ಕಾರ ಬೆಂಗಳೂರು.
3. ರಾಷ್ಟ್ರೀಯ ಸೇವಾ ಯೋಜನಾ ಘಟಕ ಹೊಂದಿರುವ **ಉಡುಪಿ, ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳ** ಎಲ್ಲಾ ಸರ್ಕಾರಿ/ಖಾಸಗಿ, ಪ.ಪೂ.ಕಾಲೇಜುಗಳ ಪ್ರಾಂಶುಪಾಲರುಗಳ ಸೂಕ್ತ ಕ್ರಮಕ್ಕಾಗಿ.
4. ಜಂಟಿ ನಿರ್ದೇಶಕರು/ಆಡಳಿತ ಮತ್ತು ಮಾನ್ಯತೆ, ನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು–12
5. **ಉಡುಪಿ, ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳ** ಉಪನಿರ್ದೇಶಕರುಗಳ ಮಾಹಿತಿಗಾಗಿ.
6. ವಿಭಾಗೀಯ ಮಟ್ಟದ ಅಧಿಕಾರಿಗಳು
7. ಲೆಕ್ಕಾಧಿಕಾರಿಗಳು ಲೆಕ್ಕ ಪತ್ರ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು–12
8. ನಿರ್ದೇಶಕರ ಅಪ್ತ ಶಾಖೆ
9. ಕಛೇರಿ